**ಸಾಕ್ಷಿಗೆ ದಿನಾಂಕ:17-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು ::2 ರಿಂದ 4 ನೇ ಪ್ರತಿವಾದಿ ಪರ ಶ್ರೀ. SNM ವಕೀಲರಿಂದ ::**

ನನ್ನ ತಂದೆ ಕರಿಯಪ್ಪ ರವರಿಗೆ ಒಟ್ಟು 6 ಜನ ಮಕ್ಕಳಿದ್ದು, ಅವರ ಹೆಸರುಗಳು ಜಯಮ್ಮ ರಾಜಪ್ಪ ಲೋಕೇಶಪ್ಪ ಸರೋಜಮ್ಮ, ನಾನು ಮತ್ತು ಪ್ರೇಮಾ ಆಗಿರುತ್ತೇವೆ. ಸದರಿ ವ್ಯಕ್ತಿಗಳಲ್ಲಿ ನನ್ನ ಅಣ್ಣ ರಾಜಪ್ಪ ರವರು ಮೃತರಾಗಿರುತ್ತಾರೆ ಎಂದರೆ ಸರಿ. ನಾನು ಸರ್ಕಾರಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾರಾಣಪುರ ಗ್ರಾಮದಲ್ಲಿ ಇರುವ ನಮ್ಮ ಕುಟುಂಬದ ಆಸ್ತಿಗಳನ್ನು ನಾನು, ಪೂರ್ಣಿಮ ಮತ್ತು ಲೋಕೇಶಪ್ಪ ರವರು ವ್ಯವಸಾಯ ಮಾಡಿಕೊಂಡಿರುತ್ತೇವೆ. 5 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಉಳುಮೆ ಮಾಡಲು ಬಿಡುತ್ತಿಲ್ಲ ಎಂದರೆ ಸರಿ. ಆದಕಾರಣ ನಮ್ಮ ಕುಟುಂಬದ ಸ್ವತ್ತುಗಳು ಈಗ ಬೀಳು ಬಿಟ್ಟಿರುತ್ತದೆ ಎಂದರೆ ಸರಿ. ಆ ರೀತಿ ಒಂದು ವರ್ಷದಿಂದ ಬೀಳು ಬಿಟ್ಟಿರುತ್ತದೆ.

ದಾವಾ ಐಟಂ 11 ಆಸ್ತಿಯು ನನ್ನ ಅಣ್ಣ ರಾಜಪ್ಪ ರವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ಸರಿ. ಸದರಿಯವರ ಹೆಸರಿಗೆ ಹಕ್ಕುಪತ್ರ ನೀಡಿದ್ದು ಅವರ ಹೆಸರಿಡಗೆ ಖಾತೆ ಮಾಡಿಕೊಂಡು ಪ್ರಸ್ತುತದಲ್ಲಿ ಅವರ ವಾರಸುದಾರರು ಅಂದರೆ 2 ರಿಂದ 4 ನೇ ಪ್ರತಿವಾದಿ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಸ್ವತ್ತಿನ ಮೇಲೆ ಪ್ರಸ್ತುತದಲ್ಲಿ 2 ರಿಂದ 4 ನೇ ಪ್ರತಿವಾದಿ ಹೊರತುಪಡಿಸಿ ಬೇರೆ ಕುಟುಂಬದ ಸದಸ್ಯರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ದಾವಾ ಐಟಂ 12 ಗ್ರಾಮ ಠಾಣಾ ಜಾಗ ಆಗಿರುತ್ತದೆ ಎಂದರೆ ಸರಿ. ಸದರಿ ಜಾಗವು ಖಾಲಿ ನಿವೇಶನ ಆಗಿರುತ್ತದೆ. ದಾವಾ ಐಟಂ 11 ಹೊರತುಪಡಿಸಿ ಉಳಿದ ಸ್ವತ್ತುಗಳಲ್ಲಿ ನನ್ನ ಎಲ್ಲಾ ಸಹೋದರ ಸಹೋದರಿಯರು ಮತ್ತು ಅವರ ವಾರಸುದಾರರಿಗೆ ಹಕ್ಕು ಇರುತ್ತದೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ವಾಸ ಮಾಡಿಕೊಂಡಿರುವ ಮನೆಯನ್ನು 2 ನೇ ಪ್ರತಿವಾದಿಯ ಮನೆಯಿಂದ ನೀಡಲಾಗಿರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿಯನ್ನು 2 ನೇ ಪ್ರತಿವಾದಿಯ ತಮ್ಮನಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ ಜೀವನ ಮಾಡಲು ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿ.

ಆದಕಾರಣ ಅವರಿಗೆ 4 ನೇ ಪ್ರತಿವಾದಿಯ ಮದುವೆ ಮಾಡಲು ಇನ್ನು ಆಗಿರುವುದಿಲ್ಲ ಎಂದರೆ ಸರಿ. ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲು 5 ನೇ ಪ್ರತಿವಾದಿ ತೊಂದರೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ.

**:: ಪಾಟೀ ಸವಾಲು ::22 ನೇ ಪ್ರತಿವಾದಿ ಪರ ಶ್ರೀ. GCT ವಕೀಲರಿಂದ ::**

ನನ್ನ ಮುತ್ತಜ್ಜ ಹನುಮಪ್ಪ ರವರಿಗೆ ಬಸಪ್ಪ ಮತ್ತು ನೀಲಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನೀಲಪ್ಪ ರವರು ಹನುಮಪ್ಪ ರವರ ಹೆಂಡತಿ ಮಗ ಆಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಬಸಪ್ಪನಿಗೆ ಮಲ್ಲಪ್ಪ, ಹನುಮಪ್ಪ ಮತ್ತು ಕರಿಯಪ್ಪ ಎಂದರೆ ಸರಿ. ಮೇಲೆ ಹೇಳಿದ ನೀಲಪ್ಪ ರವರಿಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಅವರುಗಳ ಹೆಸರುಗಳು ಬಸಪ್ಪ ಚಂದ್ರಪ್ಪ ಮತ್ತು ಯೋಗೇಂದ್ರಪ್ಪ ಆಗಿರುತ್ತದೆ ಎಂದರೆ ಸರಿ. ಬಸಪ್ಪ ಮತ್ತು ನೀಲಪ್ಪ ರವರು ನಮ್ಮ ಕುಟುಂಬದ ಆಸ್ತಿಗಳನ್ನು ಸುಮಾರು 40-50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗದ ಅನ್ವಯ ದಾವಾ ಐಟಂ 13 ಆಸ್ತಿಯು ಪೈಕಿ ತಲಾ 36 ಗುಂಟೆ ಆಸ್ತಿಯು ನೀಲಪ್ಪನ ಮಕ್ಕಳಾದ ಚಂದ್ರಪ್ಪ ಮತ್ತು ಯೋಗೇಂದ್ರಪ್ಪ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಅನ್ವಯ ಅವರ ಹೆಸರಿಗೆ ಖಾತೆ ಹಾಗೂ ಪಹಣಿ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಅವರೇ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಭಾಗದ ಅನ್ವಯ ಚಂದ್ರಪ್ಪನಿಗೆ ಬಂದ 36 ಗುಂಟೆ ಆಸ್ತಿಯಲ್ಲಿ ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಇರುತ್ತಾರೆ ಎಂದರೆ ಸರಿ. ಸದರಿ 36 ಗುಂಟೆ ಪೈಕಿ 11 ಗುಂಟೆ ಆಸ್ತಿಯನ್ನು 22 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟದ ಅನ್ವಯ ಸದರಿ ಸ್ವತ್ತಿನ ಖಾತೆ ಹಾಗೂ ಪಹಣಿ 22 ನೇ ಪ್ರತಿವಾದಿಯ ಹೆಸರಿಗೆ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ 11 ಗುಂಟೆ ಜಾಗವನ್ನು ಚಂದ್ರಪ್ಪನ ಮಕ್ಕಳು ಗೃಹಕೃತ್ಯದ ಖರ್ಚಿಗಾಗಿ ಅಂದಿನ ಮಾರುಕಟೆ ಬೆಲೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 22 ನೇ ಪ್ರತಿವಾದಿಯು ಸದರಿ ಖರೀದಿಯ ನಂತರ ಅವರ ಆಸ್ತಿಯನ್ನು ಅಭಿವೃದ್ದಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಹಿಂದೆ 22 ನೇ ಪ್ರತಿವಾದಿ ಮಾರಾಟ ಮಾಡಿದ ಕಾರಣ ಅವರನ್ನು ವಿನಾಕರಣ ಈ ದಾವೆಯಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

ನೀಲಪ್ಪ ಹಾಗೂ ಅವರ ಮಕ್ಕಳ ಆಸ್ತಿಯಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಿಂದೆ ಬಸಪ್ಪ ಹಾಗೂ ನೀಲಪ್ಪ ರವರು ಕಾನೂನಿನ ರೀತಿ ವಿಭಾಗ ಮಾಡಿಕೊಳ್ಳದೇ ನಮ್ಮ ಅಜ್ಜನ ಆಸ್ತಿಯನ್ನು ನೀಲಪ್ಪ ರವರು ಸೇರಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ 13 ಆಸ್ತಿಯಲ್ಲಿ 11 ಗುಂಟೆಯನ್ನು 22ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಇನ್ನು ಉಳಿಕೆ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. 22 ನೇ ಪ್ರತಿವಾದಿ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ಉಳಿದ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: